(1454)

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

GST : 29AAALV0060D1ZS

ಸಂಖ್ಯೆ:
No: ಬೆಂಅಪ್ರಾ/ನಯೋಸ/PRL-69/2011-12/ 1924 /2021-22.

ದಿನಾಂಕ: 001454
Date: 03/03/2022

## ಕಾರ್ಯಾದೇಶ

ವಿಷಯ:- ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ದೊಡ್ಡಬೆಲೆ ಗ್ರಾಮದ ಸರ್ವೆ ಸಂಖ್ಯೆ: 13/4ಎ, 14/1, 14/4, 14/5, 14/6, 14/7, 14/8, 14/9, 15/1,2,3,4,5,6,7ಎ,7ಬಿ,8,10, 16/1,2 17/5,6,7,8,9,10 ಮತ್ತು 20/1,2 ರಲ್ಲಿನ ಒಟ್ಟು 30 ಎಕರೆ 07.75 ಗುಂಟೆ (122188.75 ಚ.ಮೀ) ವಿಸ್ತೀರ್ಣದ ಪ್ರದೇಶಕ್ಕೆ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸಲು ಶ್ರೀ. ಜವಹರ್ ದೊರೆಸ್ವಾಮಿ ಮತ್ತು ಶ್ರೀ. ಅಜೋಯ್ ಕುಮಾರ್, ಮೆ: ಪೀಪಲ್ಸ್ ಎಜುಕೇಶನ್ ಸೊಸೈಟಿ (ಪಿಇಎಸ್) ರವರು ಕೋರಿರುವ ಬಗ್ಗೆ.

ಉಲ್ಲೇಖ:-

1. ಅರ್ಜಿದಾರರ ಅರ್ಜಿ ದಿನಾಂಕ 30.04.2019 ಮತ್ತು 29.01.2021.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 33/2021, ದಿನಾಂಕ 16.02.2021.
3. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-69/2011-12/4292/2015-16, ದಿನಾಂಕ 20.02.2016.
4. ಕೆನರಾ ಬ್ಯಾಂಕ ಚಲನ್ ನಂ. 7971, ದಿನಾಂಕ 17.05.2016.
5. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-69/2011-12/656/2017-18, ದಿನಾಂಕ 29.06.2017.
6. ಕೆನರಾ ಬ್ಯಾಂಕ ಚಲನ್ ನಂ. 24591, ದಿನಾಂಕ 28.07.2017.
7. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-69/2011-12/37/2020-21, ದಿನಾಂಕ 08.04.2021.
8. ಅರ್ಜಿದಾರರ ಪತ್ರ ದಿನಾಂಕ 23.07.2021.
9. ಮಾನ್ಯ ಅಧ್ಯಕ್ಷರ ಆದೇಶ ದಿನಾಂಕ 12.08.2021.
10. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-69/2011-12/775/2021-22, ದಿನಾಂಕ 12.08.2021.
11. ಕೆನರಾ ಬ್ಯಾಂಕ್ ಚಲನ್ ನಂ. 8690 ಮತ್ತು 8691, ದಿನಾಂಕ 18.08.2021..
12. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-69/2011-12/1399/2021-22, ದಿನಾಂಕ 07.12.2021.



Scanned with CamScanner

13. ಕೆನರಾ ಬ್ಯಾಂಕ್ ಚಲನ್ ನಂ. 11788, ದಿನಾಂಕ 10.12.2021.
14. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-69/2011-12/968/2021-22, ದಿನಾಂಕ 14.09.2021.
15. ಅಧಿಕ ಜಿಲ್ಲಾ ನೊಂದಣಾದಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪರಿತ್ಯಾಜನಾ ಪತ್ರ BDA-1-02328-2021-22, ಸಿ.ಡಿ. ನಂ. BDAD920, ದಿನಾಂಕ 27.10.2021.

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ದೊಡ್ಡಬೆಲೆ ಗ್ರಾಮದ ಸರ್ವೆ ಸಂಖ್ಯೆ: 13/4ಎ, 14/1, 14/4, 14/5, 14/6, 14/7, 14/8, 14/9, 15/1,2,3,4,5,6,7ಎ,7ಬಿ,8,10, 16/1,2 17/5,6,7,8,9,10 ಮತ್ತು 20/1,2 ರಲ್ಲಿನ ಒಟ್ಟು 30 ಎಕರೆ 07.75 ಗುಂಟೆ (122188.75 ಚ.ಮೀ) ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸುವಂತೆ ಶ್ರೀ. ಜವಹರ್ ದೊರೆಸ್ವಾಮಿ ಮತ್ತು ಶ್ರೀ. ಅಜೋಯ್ ಕುಮಾರ್, ಮೆ: ಪೀಪಲ್ಸ್ ಎಜುಕೇಶನ್ ಸೊಸೈಟಿ (ಪಿಇಎಸ್) ರವರು ಉಲ್ಲೇಖ [1] ರಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ದಿನಾಂಕ 16.02.2021 ರಂದು ಜರುಗಿದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 33/2021 ರಲ್ಲಿ ಮಂಡಿಸಿ ಚರ್ಚಿಸಲಾಗಿರುತ್ತದೆ. ಚರ್ಚೆಯ ನಂತರ ಅರ್ಜಿದಾರರು ಸಲ್ಲಿಸಿರುವ ವಸತಿ ಬಡಾವಣೆ ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದರಿಂದ Circulation Pattern ಗೆ ಅನುಗುಣವಾಗಿ ವ್ಯಾಲಿ ಪಕ್ಕದ ಉದ್ಯಾನವನದ ನಂತರದ ರಸ್ತೆಗಳನ್ನು 12.19 ಮೀ. ಅಗಲಕ್ಕೆ ಅಳವಡಿಸುವ ಷರತ್ತು ಹಾಗೂ ಸಾಮಾನ್ಯ ಷರತ್ತುಗಳಿಗೊಳಪಟ್ಟು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ದೊಡ್ಡಬೆಲೆ ಗ್ರಾಮದ ಸರ್ವೆ ಸಂಖ್ಯೆ: 13/4ಎ, 14/1, 14/4, 14/5, 14/6, 14/7, 14/8, 14/9, 15/1,2,3,4,5,6,7ಎ,7ಬಿ,8,10, 16/1,2 17/5,6,7,8,9,10 ಮತ್ತು 20/1,2 ರಲ್ಲಿನ ಒಟ್ಟು 30 ಎಕರೆ 07.75 ಗುಂಟೆ (122188.75 ಚ.ಮೀ) ವಿಸ್ತೀರ್ಣದ ಪ್ರದೇಶಕ್ಕೆ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯನ್ನು ನಿಯಮಾನುಸಾರ ಅನುಮೋದನೆ ನೀಡುವ ಅಧಿಕಾರವನ್ನು ಆಯುಕ್ತರವರಿಗೆ ಪ್ರತ್ಯಾಯೋಜಿಸಲು ತೀರ್ಮಾನಿಸಲಾಯಿತು.

ಉಲ್ಲೇಖ [3] ರ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ₹. 68,44,650/- [₹. ಅರವತ್ತೆಂಟು ಲಕ್ಷದ ನಲವತ್ತನಾಲ್ಕು ಸಾವಿರದ ಆರುನೂರ ಐವತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ದಿನಾಂಕ 20.02.2016 ರಂದು ಅರ್ಜಿದಾರರಿಗೆ ತಿಳಿಸಲಾಗಿತ್ತು. ಅರ್ಜಿದಾರರು ಉಲ್ಲೇಖ [4] ರಂತೆ ಕೆನರಾ ಬ್ಯಾಂಕ್ ಚಲನ್ ನಂ. 7971, ದಿನಾಂಕ 17.05.2016 ರಂದು ₹. 68,44,650/- [₹. ಅರವತ್ತೆಂಟು ಲಕ್ಷದ ನಲವತ್ತನಾಲ್ಕು ಸಾವಿರದ ಆರುನೂರ ಐವತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಸದರಿ ಮೊಬಲಗು ಪ್ರಾಧಿಕಾರಕ್ಕೆ ಜಮೆ ಆಗಿರುವ ಬಗ್ಗೆ ದಿನಾಂಕ 17.06.2016 ರಂದು ಪ್ರಾಧಿಕಾರದ ಆರ್ಥಿಕ ಸದಸ್ಯರು ದೃಢೀಕರಿಸಿರುತ್ತಾರೆ.

ಉಲ್ಲೇಖ [5] ರ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ₹. 10,22,300/- [₹. ಹತ್ತು ಲಕ್ಷದ ಇಪ್ಪತ್ತೆರಡು ಸಾವಿರದ ಮೂನ್ನೂರು ಮಾತ್ರ] ಗಳನ್ನು ಪಾವತಿಸಲು ದಿನಾಂಕ 29.06.2017 ರಂದು ಅರ್ಜಿದಾರರಿಗೆ ತಿಳಿಸಲಾಗಿತ್ತು. ಅರ್ಜಿದಾರರು ಉಲ್ಲೇಖ [6] ರಂತೆ ಕೆನರಾ ಬ್ಯಾಂಕ್ ಚಲನ್ ನಂ. 24591, ದಿನಾಂಕ 28.07.2017 ರಂದು 10,22,300/- [₹. ಹತ್ತು ಲಕ್ಷದ ಇಪ್ಪತ್ತೆರಡು ಸಾವಿರದ ಮೂನ್ನೂರು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಸದರಿ ಮೊಬಲಗು ಪ್ರಾಧಿಕಾರಕ್ಕೆ ಜಮೆ ಆಗಿರುವ ಬಗ್ಗೆ ದಿನಾಂಕ 23.08.2017 ರಂದು ಪ್ರಾಧಿಕಾರದ ಆರ್ಥಿಕ ಸದಸ್ಯರು ದೃಢೀಕರಿಸಿರುತ್ತಾರೆ.

Scanned with CamScanner

(1453)

ಉಲ್ಲೇಖ [7] ರ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ₹. 01,53,46,220/- [₹. ಒಂದು ಕೋಟಿ ಐವತ್ತಮೂರು ಲಕ್ಷದ ನಲವತ್ತಾರು ಸಾವಿರದ ಇನ್ನೂರ ಇಪ್ಪತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ಅರ್ಜಿದಾರರಿಗೆ ದಿನಾಂಕ 08.04.2021 ರಂದು ತಿಳಿಸಲಾಗಿತ್ತು. ಸದರಿ ಪತ್ರವನ್ನು ದಿನಾಂಕ 08.04.2021 ರಂದು ಸ್ವೀಕರಿಸಿದ್ದು, 90 ದಿನಗಳ ಅವಧಿಯು ದಿನಾಂಕ 06.07.2021 ರಂದು ಮುಕ್ತಾಯವಾಗಿರುತ್ತದೆ. ಉಲ್ಲೇಖ [8] ರಂತೆ ಅರ್ಜಿದಾರರು ಮರು ಮನವಿ ಸಲ್ಲಿಸಿ ಶುಲ್ಕಗಳನ್ನು ಪಾವತಿಸಲು ಕಾಲಾವಕಾಶ ನೀಡಬೇಕೆಂದು ಕೋರುತ್ತಾ, ಬಡಾವಣೆ ನಕ್ಷೆಯಲ್ಲಿ ಕೆಲವು ತಿದ್ದುಪಡಿಗಳನ್ನು ಅಳವಡಿಸಿಕೊಡುವಂತೆ ಕೋರುತ್ತಾ, ತಿದ್ದುಪಡಿಗಳನ್ನು ಅಳವಡಿಸಿರುವ ಕರಡು ಬಡಾವಣೆ ನಕ್ಷೆಯನ್ನು ಸಹಾ ಸಲ್ಲಿಸಿರುತ್ತಾರೆ.

00145

ಅರ್ಜಿದಾರರು ತಿದ್ದುಪಡಿಗಳೊಂದಿಗೆ ಸಲ್ಲಿಸಿರುವ ಬಡಾವಣೆ ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುತ್ತದೆ. ಹಾಗೂ Karnataka Planning Authority Rules 1965 ನಿಯಮ 37(2) ರನ್ವಯ ವಿಷಯವನ್ನು ನಗರ ಯೋಜನಾ ಸಮಿತಿ ಸಭೆಯಲ್ಲಿ ಮಂಡಿಸಿ, ಅರ್ಜಿದಾರರಿಗೆ ಶುಲ್ಕಗಳ ಕಾಲಾವಧಿಯನ್ನು 9 ತಿಂಗಳವರೆಗೆ ಅಂದರೆ 06/07/2021 ರಿಂದ 06/04/2022 ರವರೆಗೆ ವಿಸ್ತರಿಸಬಹುದಾಗಿದ್ದು, ಸಮಿತಿ ಸಭೆ ನಡೆಸಲು ಕಾಲಾವಕಾಶ ಬೇಕಾಗಿರುವುದರಿಂದ ಮಾನ್ಯ ಅಧ್ಯಕ್ಷರ ಅನುಮೋದನೆ ಪಡೆದು ಅರ್ಜಿದಾರರಿಗೆ 9 ತಿಂಗಳ ಕಾಲಾವಧಿಯನ್ನು ವಿಸ್ತರಿಸಿ ಪತ್ರ ನೀಡಿ ತದನಂತರ ಪ್ರಸ್ತಾವನೆಯನ್ನು ಸ್ಥಿರೀಕರಣ ಪಡೆಯಬಹುದಾದ ಕಾರಣ ಉಲ್ಲೇಖ [9] ರಂತೆ ಮಾನ್ಯ ಅಧ್ಯಕ್ಷರ ಆದೇಶದಂತೆ ಉಲ್ಲೇಖ [10] ರಂತೆ ಅರ್ಜಿದಾರರಿಗೆ ದಿನಾಂಕ:12/08/2021 ರಂದು ರೂ.1,53,46,220.00/- ಗಳನ್ನು ಪಾವತಿಸಲು ಪತ್ರ ನೀಡಲಾಗಿತ್ತು.

ಅರ್ಜಿದಾರರು ಉಲ್ಲೇಖ [11] ರಂತೆ ಕೆನರಾ ಬ್ಯಾಂಕ್ ಚಲನ್ ನಂ. 8690 ಮತ್ತು 8691 ರ ಮೂಲಕ ದಿನಾಂಕ 18.08.2021 ರಂದು ಕ್ರಮವಾಗಿ ₹ 01,12,37,575/- [₹. ಒಂದು ಕೋಟಿ ಹನ್ನೆರಡು ಲಕ್ಷದ ಮೂವತ್ತೇಳು ಸಾವಿರದ ಐದುನೂರ ಎಪ್ಪತ್ತೈದು ಮಾತ್ರ] ಮತ್ತು ₹ 41,08,645/- [₹. ನಲವತ್ತೊಂದು ಲಕ್ಷದ ಎಂಟು ಸಾವಿರದ ಆರುನೂರ ನಲವತ್ತೈದು ಮಾತ್ರ] ಗಳನ್ನು ಪ್ರಾಧಿಕಾರದ ವಿವಿಧ ಲೆಕ್ಕ ಶೀರ್ಷಿಕೆಗಳಿಗೆ ಪಾವತಿಸಿರುತ್ತಾರೆ. ಸದರಿ ಶುಲ್ಕವು ಪ್ರಾಧಿಕಾರಕ್ಕೆ ಸಂದಾಯವಾಗಿರುವ ಬಗ್ಗೆ ದಿನಾಂಕ 29.09.2021 ರಂದು ಪ್ರಾಧಿಕಾರದ ಆರ್ಥಿಕ ಸದಸ್ಯರು ದೃಢೀಕರಿಸಿರುತ್ತಾರೆ.

ಉಲ್ಲೇಖ [12] ರ ಪತ್ರದಲ್ಲಿ ವಿಳಂಭದ ಅವಧಿಗೆ ಬಡ್ಡಿ ಶುಲ್ಕದ ಬಾಬ್ತು ₹. 02,37,972/- [₹. ಎರಡು ಲಕ್ಷದ ಮೂವತ್ತೇಳು ಸಾವಿರದ ಒಂಭೈನೂರ ಎಪ್ಪತ್ತೆರಡು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ಅರ್ಜಿದಾರರಿಗೆ ದಿನಾಂಕ 07.12.2021 ರಂದು ತಿಳಿಸಲಾಗಿತ್ತು. ಉಲ್ಲೇಖ [13] ರಂತೆ ಕೆನರಾ ಬ್ಯಾಂಕ್ ಚಲನ್ ನಂ. 11788 ರ ಮೂಲಕ ₹ 02,37,972/- [₹. ಎರಡು ಲಕ್ಷದ ಮೂವತ್ತೇಳು ಸಾವಿರದ ಒಂಭೈನೂರ ಎಪ್ಪತ್ತೆರಡು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಸದರಿ ಮೊತ್ತವು ಪ್ರಾಧಿಕಾರದ ಲೆಕ್ಕ ಶೀರ್ಷಿಕೆಯಲ್ಲಿ ಸಂದಾಯವಾಗಿರುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 22.12.2021 ರಂದು ದೃಢೀಕರಿಸಿರುತ್ತಾರೆ.

ಉಲ್ಲೇಖ [14] ರಂತೆ ತಾತ್ಕಾಲಿಕ ಕರಡು ವಸತಿ ಬಡಾವಣೆ ನಕ್ಷೆಯಲ್ಲಿನ ಉದ್ಯಾನವನ / ಬಯಲುಜಾಗಗಳು, ಪಬ್ಲಿಕ್ ಯುಟಿಲಿಟಿ ಮತ್ತು ರಸ್ತೆ ಪ್ರದೇಶಗಳನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು [ದಕ್ಷಿಣ], ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರಿಗೆ ತಿಳಿಸಲಾಗಿತ್ತು.

Scanned with CamScanner

ಕಾರ್ಯಪಾಲಕ ಅಭಿಯಂತರರು [ದಕ್ಷಿಣ], ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಉಲ್ಲೇಖ [15] ರಂತೆ ತಾತ್ಕಾಲಿಕ ಕರಡು ವಸತಿ ಬಡಾವಣೆ ನಕ್ಷೆಯಲ್ಲಿನ ಉದ್ಯಾನವನ / ಬಯಲುಜಾಗಗಳು, ಪಬ್ಲಿಕ್ ಯುಟಿಲಿಟಿ ಮತ್ತು ರಸ್ತೆ ಪ್ರದೇಶಗಳನ್ನು ದಿನಾಂಕ 27.10.2021 ರಂದು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಕೊಂಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ದೊಡ್ಡಬೆಲೆ ಗ್ರಾಮದ ಸರ್ವೆ ಸಂಖ್ಯೆ: 13/4ಎ, 14/1, 14/4, 14/5, 14/6, 14/7, 14/8, 14/9, 15/1,2,3,4,5,6,7ಎ,7ಬಿ,8,10, 16/1,2 17/5,6,7,8,9,10 ಮತ್ತು 20/1,2 ರಲ್ಲಿನ ಒಟ್ಟು 30 ಎಕರೆ 07.75 ಗುಂಟೆ (122188.75 ಚ.ಮೀ) ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ 1961 ರ ಕಲಂ 17 [2A], ಬಿಡಿಎ ಕಾಯ್ದೆ 1976 ರ ಕಲಂ 32 ಹಾಗೂ ವಲಯ ನಿಯಮಾವಳಿ Chapter 6.1 ರಂತೆ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯನ್ನು Demarcation & Development ಉದ್ದೇಶಕ್ಕಾಗಿ ಮಾತ್ರ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದಿಸಲಾಗಿದೆ.

| | |
|---|---|
| 1 | ರೇರಾ ಅಧಿನಿಯಮ 2016 ಹಾಗೂ ಸಂಬಂಧಿತ ನಿಯಮಗಳು, 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸುವುದು. |
| 2 | ಪ್ರಸ್ತಾವನೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಾಗಲೀ/ಲೋಕಾಯುಕ್ತದಲ್ಲಾಗಲೀ/ಎಸಿಬಿಯಲ್ಲಾಗಲೀ ಪ್ರಕರಣ ದಾಖಲಾಗಿದ್ದಲ್ಲಿ ತಾವೇ ಪರಿಹರಿಸಿಕೊಳ್ಳತಕ್ಕದ್ದು. |
| 3 | ಬೆಂಗಳೂರು ಜಿಲ್ಲಾಧಿಕಾರಿಗಳಿಂದ ನೀಡಿರುವ ಭೂಪರಿವರ್ತನೆಯ ಆದೇಶದಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು. |
| 4 | ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯಂತೆ ವಿವಿಧ ಅಳತೆಯ 344 ಸಂಖ್ಯೆ ವಸತಿ ನಿವೇಶನಗಳಿದ್ದು, 34 ಸಂಖ್ಯೆ EWS ನಿವೇಶನಗಳನ್ನು ಪ್ರಸ್ತಾಪಿಸಿದ್ದು, ಒಟ್ಟಾರೆ 378 ನಿವೇಶನಗಳಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ನಿವೇಶನಗಳ ಅಳತೆ ಹಾಗೂ ನಿವೇಶನಗಳ ಒಟ್ಟು ಸಂಖ್ಯೆಯನ್ನು ಬದಲಾಯಿಸತಕ್ಕದ್ದಲ್ಲ. |
| 5 | ತಾತ್ಕಾಲಿಕ ಅನುಮೋದಿತ ಬಡಾವಣೆ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು, ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಗಳನ್ನು ಮಾಡುವಂತಿಲ್ಲ. ಬಡಾವಣೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಿದ ನಂತರ ಅಂತಿಮ ವಸತಿ ಬಡಾವಣೆ ನಕ್ಷೆಯನ್ನು ಪ್ರಾಧಿಕಾರದಿಂದ ಅನುಮೋದನೆ ಪಡೆದು ವಸತಿ ನಿವೇಶನಗಳನ್ನು ಬಿಡುಗಡೆ ಮಾಡಿಸಿಕೊಳ್ಳುವುದು. |
| 6 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ತ್ಯಾಜ್ಯ ನೀರು, ವಿಲೇವಾರಿ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿತೋರಿಸತಕ್ಕದ್ದು. |
| 7 | ವಸತಿ ಬಡಾವಣೆ ನಕ್ಷೆಯಲ್ಲಿ ತೋರಿಸಿರುವ ರಸ್ತೆ ಅಗಲವನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಬಾರದು. |
| 8 | ಕೆರೆ ಬಫರ್ ಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸ್ಥಳಿಯ ಸಂಸ್ಥೆ ಅಥವಾ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇತರೆ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಿಂದ Storm Water Drain ಅಥವಾ ಒಳಚರಂಡಿ ವ್ಯವಸ್ಥೆಗಳು ಹಾಗೂ ರಸ್ತೆಯನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಮುಫತ್ತಾಗಿ ಸಾರ್ವಜನಿಕ ಉಪಯೋಗಕ್ಕಾಗಿ ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸತಕ್ಕದ್ದು, |

Scanned with CamScanner

001452 (1452)

| | |
|---|---|
| 9 | ಅರ್ಜಿದಾರರು ಉದ್ದೇಶಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 10 | ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ತಪ್ಪು ದಾಖಲೆ ಅಥವಾ ಇನ್ನಿತರ ಫೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ನೀಡಿರುವ ಬಡಾವಣೆ ನಕ್ಷೆ ಅನುಮೋದನೆಯು ತನ್ನಿಂದತಾನೆ ರದ್ದಾಗುವುದೆಂದು ಭಾವಿಸತಕ್ಕದ್ದು. |
| 11 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು. |
| 12 | ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು, ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ. Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 13 | ವಸತಿ ವಿನ್ಯಾಸದಲ್ಲಿ ಎಲ್ಲಾ ರಸ್ತೆಗಳನ್ನು IRC Specification ಪ್ರಕಾರ ಅಭಿವೃದ್ಧಿ ಪಡಿಸತಕ್ಕದ್ದು, ಅದಕ್ಕೂ ಮುಂಚೆ ಅಂದಾಜುಪಟ್ಟಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ವಿಭಾಗದಿಂದ ಅನುಮೋದಿಸಿಕೊಳ್ಳತಕ್ಕದ್ದು, ರಸ್ತೆ ಅಭಿವೃದ್ಧಿ ಪಡಿಸುವ ಸಮಯದಲ್ಲಿ ಅಭಿಯಂತರ ವಿಭಾಗದಿಂದ ಸ್ಥಳ ಪರಿಶೀಲನೆಗಾಗಿ ಮತ್ತು ಕಾಮಗಾರಿ ಪರಿಶೀಲನೆಗೆ ಅನುವುಮಾಡಿಕೊಡತಕ್ಕದ್ದು. |
| 14 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೂ ಸೋಲಾರ್ ಲೈಟಿಂಗ್ ಮತ್ತು ಸೋಲಾರ್ ವಾಟರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸಕ್ಕದ್ದು. |
| 15 | ನಿವೇಶನಗಳನ್ನು ಯಾವ ಉದ್ದೇಶಕ್ಕಾಗಿ ಕಾಯ್ದಿರಿಸಿದೆಯೋ ಆದೇ ಉದ್ದೇಶದಿಂದ ಬೇರೆ ಉದ್ದೇಶಕ್ಕೆ ಯಾವುದೇ ಕಾರಣದಿಂದಲೂ ಬದಲಾಯಿಸಬಾರದು. |
| 16 | ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವ ಪೂರ್ವಭಾವಿಯಾಗಿ ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯತಕ್ಕದ್ದು. |
| 17 | ಸಿವಿಲ್ ಕಾಮಗಾರಿ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಅರ್ಜಿದಾರರೇ ಕಾರ್ಯಗತ ಮಾಡತಕ್ಕದ್ದು. |
| 18 | ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಉಳಿದ ಬಳಕೆಗಾಗಿ ಬಳಸತಕ್ಕದು. |
| 19 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೆ ಗೃಹ ಬಳಕೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪ್ರತ್ಯೇಕ ಕೊಳವೆಗಳನ್ನು ಒದಗಿಸತಕ್ಕದ್ದು. ಕುಡಿಯುವ ನೀರು ಮತ್ತು ಇತರ ಉಪಯೋಗಗಳಿಗೆ Dual Piping System ಅಳವಡಿಸುವುದು. |
| 20 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು. ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 21 | BESCOM ನಿರ್ದೇಶನದಂತೆ ಬಡಾವಣೆಯಲ್ಲಿ ವಿದ್ಯುಚ್ಛಕ್ತಿ ಅಳವಡಿಸಲು ಕ್ರಮ ಕೈಗೊಳ್ಳತಕ್ಕದ್ದು. |

Scanned with CamScanner

| | |
|---|---|
| 22 | ಸದರಿ ವಸತಿ ವಿನ್ಯಾಸದಲ್ಲಿ ಪ್ರಾಧಿಕಾರದ ದಿನಾಂಕ: 08/11/2010 ರ ಸುತ್ತೋಲೆಯಂತೆ ಒಟ್ಟು ವಸತಿ ನಿವೇಶನಗಳ ಶೇ.10 ರಷ್ಟು ವಸತಿ ನಿವೇಶನಗಳನ್ನು (EWS) ಆರ್ಥಿಕ ಹಿಂದುಳಿದ ವರ್ಗದವರಿಗಾಗಿ ಮತ್ತು (LIG) ಕಡಿಮೆ ಆದಾಯ ವರ್ಗದವರಿಗಾಗಿ ಕಾಯ್ದಿರಿಸಕ್ಕದ್ದು, (EWS) ಆರ್ಥಿಕ ದುರ್ಬಲ ವರ್ಗದವರಿಗಾಗಿ ಕಾಯ್ದಿರಿಸಿದ ನಿವೇಶನಗಳನ್ನು ಒಂದುಗೂಡಿಸಿ ದೊಡ್ಡ ಅಳತೆಯ ನಿವೇಶನವನ್ನಾಗಿ ಸಮಾಮೇಲನಾ ಮಾಡಿದ್ದಲ್ಲಿ ಮೂಲ ಆಶಯ ವಿಫಲವಾಗುವುದರಿಂದ (EWS) ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಕಾಯ್ದಿರಿಸಿದ ವಸತಿ ನಿವೇಶನಗಳನ್ನು ಸಮಾಮೇಲನಾ ಮಾಡತಕ್ಕದ್ದಲ್ಲ. |
| 23 | ಉದ್ಯಾನವನ ಮತ್ತು ಬಯಲು ಜಾಗಗಳನ್ನು ಅನುಮೋದಿತ ನಕ್ಷೆ ಪ್ರಕಾರ ಶೇ.100 ರಷ್ಟು ನಿವೇಶನಗಳ ಬಿಡುಗಡೆಗೊಳಿಸುವ ಮೊದಲು Chain Link Fencing ಮಾಡಿ ಅಳವಡಿಸುವುದು ಹಾಗೂ ಅಭಿವೃದ್ಧಿ ಪಡಿಸುವುದು. |
| 24 | BWSSB, BESCOM, KSPCB ಮುಂತಾದ ಇಲಾಖೆಗಳಿಂದ ಪಡೆದ NOC ಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು. |
| 25 | ಬಡಾವಣೆ ನಕ್ಷೆಯಲ್ಲಿ Transformer Yard, RWH, STP, OHT, SWM ಗಳಿಗಾಗಿ ಸೂಕ್ತಜಾಗಗಳನ್ನು ಕಾಯ್ದಿರಿಸಿದ್ದು ಇವುಗಳನ್ನು ಬದಲಾಯಿಸುವಂತಿಲ್ಲ ಹಾಗೂ ಸಂಬಂಧಪಟ್ಟ ಸಂಸ್ಥೆಯ ಅಭಿಪ್ರಾಯದಂತೆ ಅಭಿವೃದ್ಧಿಪಡಿಸುವುದು. |
| 26 | ಪ್ರಶ್ನಿತ ಪ್ರದೇಶದಲ್ಲಿ ನೈಸರ್ಗಿಕವಾಗಿ ಅಥವಾ R.S ನಕ್ಷೆ ಅಥವಾ RMP ರಂತೆ ಹಾದು ಹೋಗುವ ಹಳ್ಳ ಮತ್ತು ಕೊಳ್ಳಗಳನ್ನು ಹಾಗೂ ಬಂಡಿದಾರಿ, ಕಾಲುದಾರಿಗಳನ್ನು ಒತ್ತುವರಿ ಮಾಡಬಾರದು. ನೀರಿನ ಹರಿವಿಕೆಗೆ ಅಡಚಣೆ ಉಂಟು ಮಾಡದೇ ಸರಾಗವಾಗಿ ನೀರು ಹರಿದು ಹೋಗುವಂತೆ ಅಭಿವೃದ್ಧಿಪಡಿಸತಕ್ಕದ್ದು. |
| 27 | ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

ಮೇಲ್ಕಂಡ ಷರತ್ತುಗಳಿಗೆ ಒಳಪಡಿಸಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ದೊಡ್ಡಬೆಲೆ ಗ್ರಾಮದ ಸರ್ವೆ ಸಂಖ್ಯೆ: 13/4ಎ, 14/1, 14/4, 14/5, 14/6, 14/7, 14/8, 14/9, 15/1,2,3,4,5,6,7ಎ,7ಬಿ,8,10, 16/1,2 17/5,6,7,8,9,10 ಮತ್ತು 20/1,2 ರಲ್ಲಿನ ಒಟ್ಟು 30 ಎಕರೆ 07.75 ಗುಂಟೆ (122188.75 ಚ.ಮೀ) ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ 1961 ರ ಕಲಂ 17 [2A], ಬಿಡಿಎ ಕಾಯ್ದೆ 1976 ರ ಕಲಂ 32 ಹಾಗೂ ವಲಯ ನಿಯಮಾವಳಿ Chapter 6.1 ರಂತೆ Demarcation & Development ಉದ್ದೇಶಕ್ಕಾಗಿ ಮಾತ್ರ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಗೆ ಅನುಮೋದನೆ ನೀಡಲಾಗಿದೆ.

02/03/2022

ಆಯುಕ್ತರು,

ಬೆಂಅಪ್ರಾ, ಬೆಂಗಳೂರು

ಇವರಿಗೆ,

ಶ್ರೀ ಜವಹರ್ ದೊರೆಸ್ವಾಮಿ
ಮತ್ತು ಪಿಇಎಸ್ ಪರವಾಗಿ
ಚೀಫ್ ಆಪರೇಟಿಂಗ್ ಆಫೀಸರ್,
ಶ್ರೀ ಅಜೋಯ್ ಕುಮಾರ್,
50 ಅಡಿ ರಸ್ತೆ, ಬನಶಂಕರಿ 1 ನೇ ಹಂತ,
ಹನುಮಂತನಗರ, ಬೆಂಗಳೂರು 560 050.

Housiey.com
Scanned with CamScanner